**O.S. 115-15 DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 25.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ M V S, ವಕೀಲರಿಂದಃ**

22. ರಿಶಬ್ ಜುವೇಲರ್ಸ ನಮ್ಮದೆ ಪಾಲುದಾರಿಕೆ ಸಂಸ್ಥೆ. ಸಿಂಡಿಕೇಟ ಬ್ಯಾಂಕ, ಕೆನರಾ ಬ್ಯಾಂಕ ಆಗಿ ಪರಿವರ್ತನೆಯಾಗಿದೆ. ನಾನು ಆದಾಯ ತೆರಿಗೆ ಕಟ್ಟುತ್ತೇನೆ. ಆದಾಯ ತೆರಿಗೆ ಪ್ರಕಾರ ಕ್ಯಾಶಬುಕ್ ಹಾಗೂ ಖರ್ಚು ಮತ್ತು ಜಮಾ ತೋರಿಸಬೇಕಾಗುತ್ತದೆ ಅಂದರೆ ಸರಿ. ಖರೀದಿ ಪತ್ರದ ಬಗ್ಗೆ ಆದಾಯ ಇಲಾಖೆಗೆ ತೋರಿಸಿರುತ್ತೇವೆ. ಖರೀದಿ ಪತ್ರವು ಮಃ 1.54 ನಿಮಿಷಕ್ಕೆ ಆಗಿದೆ ಅಂದರೆ ಸರಿ. ಖರೀದಿ ಪತ್ರವು ಎಷ್ಟು ಹಣಕ್ಕೆ ಆಗಿದೆ ಎಂದು ಖರೀದಿ ಪತ್ರವನ್ನು ತೋರಿಸಿದಾಗ ತನಗೆ ಕನ್ನಡ ಓದಲು ಬರುವುದಿಲ್ಲವೆಂದು ಹೇಳುತ್ತಾರೆ. ಖರೀದಿ ಪತ್ರದಲ್ಲಿರುವ ವಿಷಯ ನೆನಪಿಲ್ಲ. ಖರೀದಿ ಪತ್ರದಲ್ಲಿ 4 ಲಕ್ಷ 50 ಸಾವಿರ ರೂ. ಅಂತಾ ಬರೆದಿದ್ದೇವೆ ಅಂದರೆ ಸರಿ. 3 ಲಕ್ಷದಾ 30 ಸಾವಿರದಾ 6 ರೂ. 16 ಚೆಕ್ ಗಳ ಮೂಲಕ ಹಣ ಕೊಡಲಾಗಿದೆ ಎಂದು ಬರೆಯಲಾಗಿದೆ ಅಂದರೆ ಸರಿ. 1 ಲಕ್ಷದಾ 19 ಸಾವಿರದಾ 994 ರೂ. ಗಳನ್ನು ನಗದಾಗಿ ಕೊಡಲಾಗಿದೆ ಎಂದು ಬರೆಯಲಾಗಿದೆ ಅಂದರೆ ಸರಿ. ಒಂದು ಲಕ್ಷದಾ 19 ಸಾವಿರದಾ 994 ರೂ. ಗಳನ್ನು ಹಿರಿಯರಿಗೆ ಕೊಟ್ಟಿದ್ದೇನೆ. 1 ಲಕ್ಷದಾ 19 ಸಾವಿರದಾ 994 ರೂ. ಗಳನ್ನು ಬಹಳ ವರ್ಷಗಳು ಆಗಿದ್ದರಿಂದ ಯಾರಿಗೆ ಕೊಟ್ಟಿದ್ದೇನೆಂದು ನೆನಪಿಲ್ಲ. 1 ಲಕ್ಷದಾ 19 ಸಾವಿರದಾ 994 ರೂ. ಗಳನ್ನು ಇಂತಹವರಿಗೆ ಕೊಟ್ಟಿರುತ್ತೇವೆ ಎಂದು ಬರೆದಿಲ್ಲ ಅಂದರೆ, ಖರೀದಿ ಪತ್ರದಲ್ಲಿ ಬರೆದಿಲ್ಲ ಅಂದರೆ ಬರೆದಿಲ್ಲ. ಸದರಿ ಹಣವನ್ನು ಕೊಟ್ಟಿಲ್ಲ. ಆ ಕಾರಣದಿಂದ ಬರೆದಿಲ್ಲ ಅಂದರೆ ಸರಿಯಲ್ಲ. 1 ಲಕ್ಷದಾ 19 ಸಾವಿರದಾ 994 ರೂ. ಗಳನ್ನು ಉಪ-ನೋಂದಣಾಧಿಕಾರಿಗಳು ನನ್ನ ಮುಂದೆ ಕೊಟ್ಟಿದ್ದಾರೆಂದು ಶರಾ ಬರೆದಿಲ್ಲ ಅಂದರೆ ಸರಿ. ಹಣ ಕೊಟ್ಟಿಲ್ಲ, ಆ ಕಾರಣದಿಂದ ಬರೆದಿಲ್ಲ ಅಂದರೆ ಸರಿಯಲ್ಲ. ಒಬ್ಬ ವ್ಯಕ್ತಿಗೆ 20 ಸಾವಿರ ರೂ. ಗಳಿಗಿಂತ ಹೆಚ್ಚಿನ ಹಣವನ್ನು ಆದಾಯ ತೆರಿಗೆ ನಿಯಮದ ಪ್ರಕಾರ ನಗದಾಗಿ ಕೊಡಲು ಬರುವುದಿಲ್ಲ ಅಂದರೆ, ಆ 2010 ರಲ್ಲಿ ಇರಲಿಲ್ಲವೆಂದು ಹೇಳುತ್ತಾರೆ. 1986 ರಿಂದ ಸದರಿ ನಿಯಮವಿದೆ ಅಂದರೆ ಗೊತ್ತಿಲ್ಲ. ಪ್ರತಿವಾದಿ 1 ಹಾಗೂ 2 ರವರು ಇಷ್ಟು ಹಣ ಚೆಕ್ ಮೂಲಕ ಕೊಡಿ ಹಾಗೂ ಇಷ್ಟು ಹಣ ನಗದಾಗಿ ಕೊಡಿ ಎಂದು ಹೇಳಿದ್ದರು. ಈ ವಿಷಯ ಖರೀದಿ ಪತ್ರದಲ್ಲಿ ಬರೆದಿಲ್ಲ ಅಂದರೆ ಸರಿ. ದಿಃ 23.10.2010 ರಂದು ಖರೀದಿ ಪತ್ರ ಮಾಡುವ ದಿನ ನನ್ನ ಖಾತೆಯಲ್ಲಿ ಖರೀದಿ ಪತ್ರಕ್ಕೆ ಸಂಪೂರ್ಣ ಹಣ ಇರಲಿಲ್ಲ ಅಂದರೆ, ಗೊತ್ತಿಲ್ಲ. 2010 ರಲ್ಲಿ ಎಷ್ಟು ಹಣ ಇತ್ತು ಎಂದು ನೆನಪಿಲ್ಲ.

**O.S. 115-15 DW-1**

ನಾವು ನ್ಯಾಯಾಲಯಕ್ಕೆ ದುರುದ್ದೇಶದಿಂದ ದಿಃ 23.10.2010 ರ ಬ್ಯಾಂಕಿನ ಸ್ಟೇಟಮೆಂಟ ದುರುದ್ದೇಶದಿಂದ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ದಿಃ 23.10.2010 ಬ್ಯಾಂಕ ಸ್ಟೇಟಮೆಂಟ ನ್ನು ಹಾಜರಪಡಿಸಿದರೆ ನಮ್ಮ ಹುಳುಕು ಗೊತ್ತಾಗುತ್ತದೆ ಎಂದು ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. 1 ಲಕ್ಷದಾ 19 ಸಾವಿರದಾ 994 ರೂ. ಗಳು ನನ್ನ ಬಳಿ ಹಣ ಇದ್ದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ಹಾಜರಪಡಿಸಿಲ್ಲ ಅಂದರೆ, ಹಾಜರಪಡಿಸಿಲ್ಲ. ದಿಃ 23.10.2010 ರಂದು ನಗದು ಹಣ ಇದ್ದ ಬಗ್ಗೆ ನಮೂದು ಮಾಡಿ ಕ್ಯಾಶಬುಕ್ ಹಾಜರಪಡಿಸಿಲ್ಲ ಅಂದರೆ ಸರಿ. ದಿಃ 23.10.2010 ನಮ್ಮ ಬಳಿ ಯಾವುದೇ ಬ್ಯಾಲೆನ್ಸ ಹಣ ಇರಲಿಲ್ಲ, ಆ ಕಾರಣದಿಂದ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. 2010 ರ ಕ್ಯಾಶಬುಕ್ ಇಲ್ಲ. ನ್ಯಾಯಾಲಯಕ್ಕೆ ಹುಳುಕು ಗೊತ್ತಾಗುತ್ತದೆ ಎಂದು ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ 1 ಹಾಗೂ 2 ರವರಿಗೆ ಚೆಕ್ ಕೊಟ್ಟ ಬಗ್ಗೆ ನಾನು ಹಾಜರಪಡಿಸಿದ ದಾಖಲೆಗಳಲ್ಲಿ ಇಲ್ಲ ಅಂದರೆ ಸರಿ. ನಾನು ಚೆಕ್ ಕೊಡದ ಕಾರಣ ಹಾಜರಪಡಿಸಿದ ದಾಖಲೆಯಲ್ಲಿ ಅವರ ಹೆಸರು ಇಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ 1 ಹಾಗೂ 2 ರವರಿಗೆ ಚೆಕ್ ಕೊಟ್ಟಿದ್ದೇನೆಂದು ಪ್ರತಿವಾದಿ ಪತ್ರ ಹಾಗೂ ಮುಖ್ಯ ವಿಚಾರಣೆ ದಾಖಲೆಗಳಲ್ಲಿ ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ.

23. ಖರೀದಿ ಪತ್ರದಲ್ಲಿ 24 ಗುಂಟೆ ಅಂತಾ ಇದೆ, ಆದರೆ ಆಸ್ತಿ ಉದ್ದಳತೆ - ಪೂರ್ವ -ಪಶ್ಚಿಮ ಹಾಗೂ ದಕ್ಷಿಣ - ಉತ್ತರ ಬರೆದಿಲ್ಲ ಅಂದರೆ ಸರಿ. 24 ಗುಂಟೆ ಆಸ್ತಿಯ ಉದ್ದಳತೆ - ಪೂರ್ವ -ಪಶ್ಚಿಮ ಹಾಗೂ ದಕ್ಷಿಣ - ಉತ್ತರ ಬರೆಯದ ಕಾರಣ ಸಂಬಂಧಪಟ್ಟವರ ಇಲಾಖೆಯವರಿಗೆ ಅಳತೆ ಮಾಡಲು ಹಾಗೂ ಭಾಗ ಮಾಡಲು ಬರುವುದಿಲ್ಲ ಅಂದರೆ ಸರಿಯಲ್ಲ. ಖರೀದಿ ಹಣವನ್ನು ಚೆಕ್ ಮೂಲಕ ಕೊಡುವಾಗ ಸಮನಾಗಿ ಕೊಟ್ಟಿಲ್ಲ ಅಂದರೆ ಅವರು ಹೇಳಿದ ಹಾಗೂ ಕೊಟ್ಟಿದ್ದೇವೆ. ಮಲ್ಲನಗೌಡ ಪಾಟೀಲ ಹೇಳಿದ ಪ್ರಕಾರ ಕೊಟ್ಟಿದ್ದೇವೆ. ಈ ರೀತಿ ಖರೀದಿ ಪತ್ರದಲ್ಲಿ ಬರೆದಿಲ್ಲ ಅಂದರೆ ಸರಿ. ಖರೀದಿ ಪತ್ರ ಅಲ್ಲ, ಅದು ಸಾಲದ ಪತ್ರ ಆ ಕಾರಣದಿಂದ ಬರೆದಿಲ್ಲ ಅಂದರೆ ಸರಿಯಲ್ಲ. ಖರೀದಿ ಪತ್ರವು ಆಗಿ ಎರಡನೇ ದಿನಕ್ಕೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ ಅಂತಾ ಗೊತ್ತಾಯಿತು. ಖರೀದಿ ಪತ್ರದಲ್ಲಿ ಉಪ-ನೋಂದಣಾಧಿಕಾರಿ ತಡೆಯಾಜ್ಞೆ ಬರೆದಿದ್ದಾರೆ ಅಂದರೆ ಸರಿ. ನ್ಯಾಯಾಲಯದಿಂದ ತಡೆಯಾಜ್ಞೆ ಬಂದ ಬಗ್ಗೆ ಗೊತ್ತಿದ್ದು, ಖರೀದಿ ಪತ್ರ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. ನ್ಯಾಯಾಲಯದ ಆದೇಶ ಮಾನ್ಯ ಮಾಡಬಾರದೆಂದು ಖರೀದಿ ಪತ್ರ ಮಾಡಿದ್ದೇವೆ ಅಂದರೆ ಸರಿಯಲ್ಲ.

**O.S. 115-15** **DW-1**

ತಡೆಯಾಜ್ಞೆ ದಿಃ 23.10.2010 ರಂದು ಬಂದ ಕಾರಣ, ಉಪ-ನೋಂದಣಾಧಿಕಾರಿಗಳು ಬರೆದಿದ್ದಾರೆ ಅಂದರೆ ಸರಿ. ಆ ರೀತಿ ಬರೆದಿದ್ದು ಅದೇ ದಿವಸ ಗೊತ್ತಾಗಿದೆ ಅಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ತಡೆಯಾಜ್ಞೆ ತೆರವುಗೊಳಿಸಲು ನಾವು ಪ್ರಯತ್ನ ಮಾಡಿಲ್ಲ. ಯಾಕೆಂದರೆ ಕೇಸ ನಮ್ಮ ಮೇಲೆ ಹಾಕಿಲ್ಲ. ನಮಗೆ ತೊಂದರೆಯಾಗುತ್ತದೆ ಎಂದು ನ್ಯಾಯಾಲಯದಲ್ಲಿ ಅರ್ಜಿ ಹಾಕಿ ಕೇಳಿಲ್ಲ ಅಂದರೆ ನೆನಪಿಲ್ಲ. ವಕೀಲರ ಮೂಲಕ ನಮಗೆ ತೊಂದರೆ ಹಾಗೂ ಲುಕ್ಸಾನ ಆಗುತ್ತದೆ ಎಂದು ಅರ್ಜಿ ಹಾಕಿ ತೆರವುಗೊಳಿಸಲು ಪ್ರಯತ್ನಪಟ್ಟಿಲ್ಲ. ನಾನು ನಿಜವಾಗಿಯೂ ಹಣ ಕೊಟ್ಟಿದ್ದರೆ ಸಂಕಟವಾಗುತ್ತಿತ್ತು ಅಂದರೆ ಸರಿಯಲ್ಲ. ಆ ಕಾರಣದಿಂದ ತಡೆಯಾಜ್ಞೆ ತೆರವುಗೊಳಿಸಲು ಪ್ರಯತ್ನಪಟ್ಟಿಲ್ಲ ಅಂದರೆ ಸರಿಯಲ್ಲ. ನಾನು ಕೋರ್ಟಿಗೆ ಹೋಗಿದ್ದರೆ ತಡೆಯಾಜ್ಞೆ ತೆರವು ಆಗುತ್ತಿತ್ತು ಅಂದರೆ, ನಾನು ಹೋಗಿಲ್ಲ. ನಾನು ಮೂರು ಜನರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಖರೀದಿ ಪತ್ರದ ಪ್ರಕಾರ 4 ಲಕ್ಷದಾ 40 ಸಾವಿರದಾ ಒಂದು ರೂ. 16 ಜನರಿಗೆ ಚಕ್ ಮೂಲಕ ಹಣ ಕೊಡಲಾಗಿದೆ ಅಂದರೆ ಸರಿ. ನಿಡಿ.3 ರ ಪ್ರಕಾರ ದಿಃ 23.10.2010 ರನಯ 3 ಲಕ್ಷದಾ 70 ಸಾವಿರದಾ 637 ರೂ. ಗಳು. ನಾವು ಚಕ್ ಕೊಟ್ಟಿದ್ದು 4 ಲಕ್ಷದಾ 440 ಸಾವಿರ ರೂ. ಅಂದರ ಸರಿ. ದಿಃ23.10.2010 ರಂದು ಚೆಕ್ ಹಾಜರಪಡಿಸಿದ್ದರೆ ಚೆಕ್ ಅಮಾನ್ಯತಗೊಳ್ಳುತ್ತಿದ್ದವು ಅಂದರೆ, ಎಲ್ಲವು ಮಾನ್ಯವಾಗಿವೆ ಎಂದು ಹೇಳುತ್ತಾರೆ. ಪ್ರತಿವಾದಿ 1 ಹಾಗೂ 2 ರವರಿಗೆ ಚೆಕ್ ಎಂದು ಮಾನ್ಯವಾಗಿದೆ ಅಂದರೆ, ನಾನು ಈ ದಿನ ಕನ್ನಡಕ ತಂದಿಲ್ಲ,ಆ ಕಾರಣದಿಂದ ನೋಡಿ ಹೇಳಲು ಆಗುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.